<u>ಸಿಸಿ ಸಂಖ್ಯೆ: - **1296/2024**</u> <u>**ಪಿ.ಡಬ್ಲ್ಯೂ:-1**</u>

ದಿನಾಂಕಃ **13-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-</u>

ನನ್ನ ಹೆಸರಿನಲ್ಲಿ 4 ಎಕರೆ ಜಮೀನು ಇರುವ ಬಗ್ಗೆ ಪಹಣಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಈಗೆ 2 ವರ್ಷಗಳಿಂದ ಅಡಿಕೆ ಸಸಿಗಳನ್ನು ಹಾಕಿದ್ದೇನೆ. ಇನ್ನೂ ಅಡಿಕೆ ಸಸಿಗಳಿಂದ ಯಾವುದೇ ಆದಾಯ ಬರುತ್ತಿಲ್ಲ ಎಂದರೆ ಸರಿ. ಸದರಿ 4 ಎಕರೆ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯ ಮೂಲ ಇಲ್ಲ ಎಂದರೆ ಸಾಕ್ಷಿಯು ಬೇರೆಯವರಿಗೆ ಸೇರಿದ 4-5 ಎಕರೆ ಜಮೀನನ್ನು ಸಾಗುವಳಿ ಆಧಾರದ ಮೇಲೆ ಪಡೆದುಕೊಂಡು ಮೆಕ್ಕೆಜೋಳವನ್ನು ಬೆಳೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಯಾರಿಗೆ ಸೇರಿದ ಸುಮಾರು 4-5 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದೀರಿ ಮತ್ತು ಸದರಿ ಜಮೀನುಗಳ ಸರ್ವೇ ನಂಬರ್ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. 1 ಎಕರೆಗೆ ಮೆಕ್ಕೆಜೋಳವನ್ನು 20-25 ಕ್ವಿಂಟಾಲ್ ಬೆಳೆಯುತ್ತೇವೆ. ಸದರಿ 1 ಎಕರೆಯಲ್ಲಿ ಎಷ್ಟು ಆದಾಯ ಬರುತ್ತದೆಯೋ ಅದರಲ್ಲಿ ಅರ್ಧದಷ್ಟು ಹಣವನ್ನು ಜಮೀನಿನ ಮಾಲೀಕರಿಗೆ ಕೊಡುತ್ತೇವೆ. ನನಗೆ ಖರ್ಚು ವೆಚ್ಚಗಳನ್ನು ತೆಗೆದು ವರ್ಷಕ್ಕೆ ರೂ.1,40,000/- ರಿಂದ 1,50,000/- ವರಮಾನ ಬರುತ್ತದೆ. ಕಳೆದ ವರ್ಷ ಮೆಕ್ಕೆಜೋಳವನ್ನು ಸುರಹೊನ್ನೆ ಗ್ರಾಮದ ಗಿರೀಶ ಎನ್ನುವವರಿಗೆ ಮಾರಾಟ ಮಾಡಿದ್ದೇನೆ. ನಾನು ಗಿರೀಶ ಎನ್ನುವವರಿಗೆ ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಮೆಕ್ಕೆಜೋಳ ಆದಾಯದಿಂದ ಬಂದಂತಹ ಹಣವನ್ನು ಬ್ಯಾಂಕ್ ನ ಖಾತೆಗೆ ಜಮಾ ಮಾಡುವುದಿಲ್ಲ ಅದನ್ನು ನೇರವಾಗಿ ಬಳಕೆ ಮಾಡಿಕೊಳ್ಳುತ್ತೇನೆ. ನನಗೆ ಸೇರಿದ 4 ಎಕರೆ ಜಮೀನಿನಲ್ಲಿ ಸುಮಾರು 2,000 ಅಡಿಕೆ ಸಸಿಗಳನ್ನು ಹಾಕಿದ್ದೇನೆ. 2,000 ಅಡಿಕೆ

ಸಸಿಗಳನ್ನು ಹಾಕಲು ಬೋರ್ವೆಲ್ ಸೇರಿ ರೂ.3 ರಿಂದ 4 ಲಕ್ಷ ಖರ್ಚಾಗಿರುತ್ತದೆ. 4 ಎಕರೆ ಜಮೀನಿಗೆ ಅಡಿಕೆ ಸಸಿಗಳನ್ನು ಹಾಕಲು ರೂ.8 ರಿಂದ 10 ಲಕ್ಷ ಖರ್ಚಾಗುತ್ತದೆ ಎಂದರೆ ಸರಿಯಲ್ಲ. ಬೇರೆಯವರ ಜಮೀನಿನಲ್ಲಿ ಸಾಗುವಳಿ ಆಧಾರದ ಮೇಲೆ ಬಂದಂತಹ ಆದಾಯದಿಂದ ಮತ್ತು ನಮ್ಮ ಮಾವನವರು ಕೊಟ್ಟ ಹಣದಿಂದ ಅಡಿಕೆ ಸಸಿಗಳನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.